# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY

Vidyasangama, National Highway – 04, Bhootaramanahatti,Belagavi - 591156

E-mail:rcubacademic2010@gmail.com ಕುಲಸಚಿವರಕಾರ್ಯಾಲಯ Website:www.rcub.ac.in

rcuregistrar@gmail.com Office of the Registrar Phone No.: 0831-2565257/34


ಕ್ರ.ಸಂ.: ರಾಚವಿ/ಬೆಳಗಾವಿ/ಕುಸಕಾ/ವಿ.ಮಂ/ಸ್ನಾವಿ/2020–21/3263 ದಿನಾಂಕ: **20–11–2020**

## 2020–21 ನೇ ಸಾಲಿನ ಸ್ನಾತಕೋತ್ತರ ಪ್ರವೇಶಕ್ಕಾಗಿ ಎರಡನೆಯ ಮತ್ತು ಅಂತಿಮ ಹಂತದ ಅಧಿಸೂಚನೆ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಸ್ನಾತಕೋತ್ತರ ಕೇಂದ್ರ ವಿಜಯಪುರ, ಬಾಗಲಕೋಟ ಮತ್ತು ಜಮಖಂಡಿ ಹಾಗೂ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳ ಸಂಯೋಜಿತ ಮಹಾವಿದ್ಯಾಲಯಗಳಲ್ಲಿನ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಬಾಕಿ ಉಳಿದಿರುವ ಸೀಟುಗಳಿಗಾಗಿ Online ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಆಸಕ್ತ ವಿಭಾಗಗಳಲ್ಲಿ ಲಭ್ಯವಿರುವ ಸೀಟುಗಳ (Seat Matrix) ಮಾಹಿತಿಯ ಅನ್ವಯವಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ www.rcub.ac.in ನ್ನು ಗಮನಿಸುವುದು.

### ಪ್ರವೇಶಾತಿಯ ಪ್ರಮುಖ ದಿನಾಂಕಗಳು

| ಕ್ರಸಂ. | ವಿವರ | ದಿನಾಂಕ |
|---|---|---|
| 1 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 23–11–2020 |
| 2 | ವೆಬ್‌ಸೈಟ್‌ನಲ್ಲಿ ತಾತ್ಕಾಲಿಕ ಮೆರಿಟ್ ಯಾದಿಯ ಪ್ರಕಟಣೆ | 24–11–2020 |
| 3 | ತಾತ್ಕಾಲಿಕ ಮೆರಿಟ್ ಯಾದಿಗೆ ಆಕ್ಷೇಪಣೆಗಳಿದ್ದಲ್ಲಿ ಕೇವಲ ಇ–ಮೇಲ್ ಮುಖಾಂತರ ಆಯಾ ವಿಭಾಗಗಳಿಗೆ ಮಧ್ಯಾಹ್ನ 12.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. | 25–11–2020 |
| 4 | ವೆಬ್‌ಸೈಟ್‌ನಲ್ಲಿ ಅಂತಿಮ ಮೆರಿಟ್ ಯಾದಿಯ ಪ್ರಕಟಣೆ (ಸಂಜೆ 5.00 ಗಂಟೆ) | 25–11–2020 |
| 5 | ಪ್ರವೇಶಾತಿ ಕೌನ್ಸಲಿಂಗ್ ಪ್ರಕ್ರಿಯೆ | 27–11–2020 |

### ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು

1. ಮೊದಲ ಹಂತದ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಎರಡನೆಯ ಹಂತದ ಪ್ರವೇಶಕ್ಕೆ ಹಾಜರಾಗಲು ಅವಕಾಶವಿರುವುದಿಲ್ಲ.
2. ಎರಡನೆಯ ಹಂತದ ಪ್ರವೇಶಕ್ಕೆ ಹೊಸ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
3. ವರ್ಗವಾರು ಬಾಕಿಯಿರುವ ಸೀಟುಗಳ ಲಭ್ಯತೆಯ ಅನುಸಾರವಾಗಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.
4. **ವರ್ಗವಾರು ಸೀಟುಗಳು ಹಂಚಿಕೆಯಾದ ನಂತರ ಸೀಟುಗಳು ಲಭ್ಯವಿದ್ದು, ಅಭ್ಯರ್ಥಿಗಳು ಇಲ್ಲದಿದ್ದ ಪಕ್ಷದಲ್ಲಿ ಸದರಿ ಸೀಟುಗಳನ್ನು ಸರಕಾರದ ಮಾರ್ಗಸೂಚಿ ಅನುಸಾರವಾಗಿ ಇತರ ವರ್ಗಗಳಿಗೆ ಮರು ಹಂಚಿಕೆ ಮಾಡಲಾಗುವುದು.**
5. ಸೀಟು ಹಂಚಿಕೆಯಾದ ನಂತರ ಅಭ್ಯರ್ಥಿಗಳು ಪೂರ್ಣಪ್ರಮಾಣದ ಪ್ರವೇಶ ಶುಲ್ಕವನ್ನು ಅದೇ ದಿನದಂದು ಭರಿಸತಕ್ಕದ್ದು.
6. ಕೌನ್ಸಲಿಂಗ್‌ಗೆ ಹಾಜರಾಗುವ ದಿನಾಂಕದಂದು ಶೈಕ್ಷಣಿಕ ಹಾಗೂ ಇನ್ನಿತರ ದಾಖಲೆಗಳ ಮೂಲ ಪ್ರತಿಗಳನ್ನು ಅಭ್ಯರ್ಥಿಗಳು ಖುದ್ದಾಗಿ ತೆಗೆದುಕೊಂಡು ಬರಬೇಕು.
7. ಜಾತಿ ಮತ್ತು ಆದಾಯ ಪ್ರಮಾಣಪತ್ರಗಳು ಕೌನ್ಸಲಿಂಗ್ ದಿನದಂದು ಚಾಲ್ತಿಯಲ್ಲಿರಬೇಕು ಇಲ್ಲದಿದ್ದಲ್ಲಿ ಪೂರ್ಣ ಪ್ರಮಾಣದ ಶುಲ್ಕವನ್ನು ಅದೇ ದಿನದಂದು ಭರಿಸಬೇಕು.

ಸಹಿ/–

**ಕುಲಸಚಿವರು**